**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.29.07.2024**

## ಪಾಟಿ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಎನ್ ಡಿ ಒ ವಕೀಲರಿಂದಃ

1. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದಿರುವ ವಿಚಾರಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣೆ ತಯಾರಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ. ದಾವಾ ಆಸ್ತಿ ನಮ್ಮ ಪೂರ್ವಜರಿಗೆ ಸೇರಿದ್ದು ಎಂದರೆ ಸರಿ. ಅದರಂತೆ ನನ್ನ ಮುತ್ತಾತ, ತಾತ ಮತ್ತು ತಂದೆಗೆ ಸೇರಿರುತ್ತದೆ. ಸದರಿಯವರ ಹೆಸರಿಗೆ ದಾಖಲಾತಿ ಇರುತ್ತದೆ. ಆ ರೀತಿ ದಾವಾ ಆಸ್ತಿ ನನ್ನ ಮುತ್ತಾತ, ತಾತ ಮತ್ತು ತಂದೆಗೆ ಸೇರಿದ್ದು ಎಂದು ತೋರಿಸಲು ಪಹಣಿಗಳು ಇರುತ್ತದೆ. ಆ ರೀತಿ ಪಹಣಿಗಳು ನನ್ನ ಮುತ್ತಾತ, ತಾತ ಮತ್ತು ತಂದೆಯ ಹೆಸರಿನಲ್ಲಿ ಇರುತ್ತದೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಮುತ್ತಾತ, ತಾತ ಮತ್ತು ತಂದೆಯ ಹೆಸರಿಗೆ ಯಾವುದೇ ದಾಖಲೆಗಳು ಇರುವುದಿಲ್ಲ, ಅವುಗಳನ್ನು ಯಾವುದೇ ನ್ಯಾಯಾಲಯಕ್ಕೆ ಹಾಜರು ಪಡಿಸದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ಮುತ್ತಾತ ನ ಹೆಸರು ಅಬ್ಬಯ್ಯ ಶಾಸ್ತ್ರಿ. ಅವರಿಗೆ 4 ಜನ ಮಕ್ಕಳು. ಅವರುಗಳೆಂದರೆ ರೇಣುಕಾರಾಧ್ಯ, ರುಧ್ರಾರಾಧ್ಯ, ಶರ್ಮಾ ಮತ್ತು ಸಿದ್ದಲಿಂಗ ಶಿವಾಚಾರ್ಯ ಎಂಬುದಾಗಿರುತ್ತದೆ. ನನ್ನ ತಾತನ ತಂದೆ ಯಾರು ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯು ನನ್ನ ಪೂರ್ವಜರಿಗೆ ಯಾವ ರೀತಿ ಬಂತು ಎಂಬ ಬಗ್ಗೆ ದಾಖಲಾತಿಗಳು ಇರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯು ವೀರ ಶೈವ ಚಿಕ್ಕಮಠಕ್ಕೆ ಸರ್ಕಾರದವರು ಮಂಜೂರು ಮಾಡಿದ್ದರು ಎಂದರೆ ಸರಿಯಲ್ಲ. ಸದರಿ ಮಠ ದಲ್ಲಿ ಇದ್ದ ದೇವರಿಗೆ ಪೂಜೆ ಮಾಡ ಬೇಕು ಎಂದು ದಾವಾ ಆಸ್ತಿಯನ್ನು ಪ್ರತಿವಾದಿ ರವರಿಗೆ ಮಠದವರು ವಹಿಸಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯು ನನ್ನ ಪೂರ್ವಜರಿಗೆ ಯಾವ ರೀತಿ ಬಂತು ಎಂಬ ಬಗ್ಗೆ ದಾಖಲಾತಿಗಳು ಇಲ್ಲದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನನ್ನ ತಾತ 1990 ರವರೆಗೂ ದೇವನಹಳ್ಳಿಯಲ್ಲಿ ಇದ್ದರೂ ನಂತರ ಮಾಗಡಿ ಗೆ ಹೋದರು ಎಂಬ ವಿಚಾರ ನನಗೆ ಗೊತ್ತಿರುವುದಿಲ್ಲ. ನನ್ನ ತಾತ 1963 ರಲ್ಲಿ ತೀರಿಕೊಂಡಿರುತ್ತಾರೆ. ಆ ಕಾರಣದಿಂದ 1990 ರಲ್ಲಿ ನನ್ನ ತಾತ ಜೀವಂತವಾಗಿರಲಿಲ್ಲ ಎಂದರೆ ಸರಿ. ಆ ಕಾರಣದಿಂದ ನನ್ನ ತಾತ ಮಾಗಡಿ ಗೆ ಹೋಗುವ ಸಂದರ್ಬದಲ್ಲಿ ದಾವಾ ಆಸ್ತಿಯನ್ನು ಪ್ರತಿವಾದಿಗಳಿಗೆ ಕೊಟ್ಟು ಹೋಗಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪದವಿ ವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನನಗೆ ಇಂಗ್ಲೀಶ್ ಓದಲು ಬರೆಯಲು ಬರುತ್ತದೆ ಎಂದರೆ ಸರಿ. ನಾನು ನಿವೃತ್ತ ಫಾರ್ಮಿಸ್ಟ್ ಆಗಿರುತ್ತೇನೆ. ದಿಃ06.11.1969 ರಲ್ಲಿ ನನ್ನ ತಂದೆ ಮತ್ತು ಅವರ ಸಹೋದರರ ನಡುವೆ

ಆದ ನೊಂದಾಯಿತ ವಿಭಾಗ ಪತ್ರ ಆಗಿರುತ್ತದೆ. ಸದರಿ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ವಿಭಾಗವು ರೇಣುಕಾರಾಧ್ಯ, ರುಧ್ರಾರಾಧ್ಯ, ಶರ್ಮಾ ಮತ್ತು ಸಿದ್ದಲಿಂಗ ಶಿವಾಚಾರ್ಯ ರವರ ನಡುವೆ ಆಗಿರುತ್ತದೆ. ಸದರಿ ವಿಭಾಗದಂತೆ ಮಾಗಡಿ ಯಲ್ಲಿರುವ ಆಸ್ತಿ ನನ್ನ ತಂದೆಯನ್ನು ಹೊರತು ಪಡಿಸಿ ಉಳಿದ ಸಹೋದರರಿಗೆ ಹಂಚಿಕೆ ಆಗಿದ್ದು, ದೇವನಹಳ್ಳಿಯಲ್ಲಿರುವ ಆಸ್ತಿ ನನ್ನ ತಂದೆಗೆ ಹಂಚಿಕೆ ಆಗಿರುತ್ತದೆ. ದಿಃ06.11.1969 ರಲ್ಲಿ ಯಾವುದೇ ವಿಭಾಗ ಪತ್ರ ಆಗಿರುವುದಿಲ್ಲ, ಸದರಿ ವಿಭಾಗ ಪತ್ರದಂತೆ ನನ್ನ ತಂದೆಗೆ ದೇವನಹಳ್ಳಿಯಲ್ಲಿದ್ದ ಆಸ್ತಿ ಹಂಚಿಕೆ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. 1969 ರಲ್ಲಿ ನನ್ನ ತಾತನ ಹೆಸರಿಗೆ ಖಾತೆ ಆಗಬೇಕು ಎಂದು ದೇವನಹಳ್ಳಿ ಪುರಸಭೆ ಗೆ ಅರ್ಜಿ ಕೊಟ್ಟಿರುತ್ತೇನೆ. ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ 1931 ರಿಂದ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿ. ಆ ರೀತಿ ಪ್ರತಿವಾದಿಗಳು ಅವರ ತಾತನ ಕಾಲದಿಂದಲೂ ಮಠದಲ್ಲಿಯೇ ಪೂಜೆ ಮಾಡಿಕೊಂಡು ಅಲ್ಲಿಯೇ ವಾಸ ಇದ್ದರೂ ಎಂದರೆ ಸರಿ. ದಾವಾ ಆಸ್ತಿಯು ನನ್ನ ತಾತನ ಹೆಸರಿನಿಂದ ನನ್ನ ತಂದೆಯ ಹೆಸರಿಗೆ ಅಂದಾಜು 1972 ರಲ್ಲಿ ಬಂದಿರಬಹುದು. ನನ್ನ ತಂದೆಯ ಹೆಸರಿಗೆ ಖಾತೆ ಬದಲಾವಣೆ ಆದ ನಂತರ ಅವರೇ ಕಂದಾಯ ಪಾವತಿ ಮಾಡುತ್ತಿದ್ದರು. ಸಾಕ್ಷಿ ಪುನಃ ಮುಂದುವರಿದು ಬಾಡಿಗೆ ಹಣದಲ್ಲಿ ಪ್ರತಿವಾದಿಗಳು ನನ್ನ ತಂದೆ ಹೆಸರಿನಲ್ಲಿ ಕಂದಾಯ ಪಾವತಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ಅವರ ಸಹೋದರರು ದೇವನಹಳ್ಳಿಯಲ್ಲಿ ಇದ್ದು, ದಾವಾ ಆಸ್ತಿಯನ್ನು ಅನುಭೋಗ ಮಾಡುತ್ತಿದ್ದರು ಎಂದು ತೋರಿಸಲು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ತಾತ, ಅವರ ಅಣ್ಣ ತಮ್ಮಂದಿರು ಯಾವತ್ತೂ ದೇವನಹಳ್ಳಿಯಲ್ಲಿ ವಾಸವಾಗಿರಲಿಲ್ಲ ಎಂದರೆ ಸರಿ.

5. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿಯ ಹೆಸರಿಗೆ ಯಾವಾಗ ಖಾತೆ ಬದಲಾವಣೆ ಆಯಿತು ಎಂದು ಹೇಳಲು ಆಗುವುದಿಲ್ಲ. ಆ ರೀತಿ ಯಾವುದೇ ಖಾತೆ ಮಾಡಿಕೊಂಡಿರುವುದಿಲ್ಲ, ಅವುಗಳನ್ನು ನಾವು ಸೃಷ್ಟಿಮಾಡಿಕೊಂಡಿರುವ ಕಾರಣ ಪ್ರತಿವಾದಿಗಳಿಗೆ ಬಾದಕ ಆಗುವುದಿಲ್ಲ ಎಂದರೆ ಸರಿಯಲ್ಲ. ಸದರಿ ಖಾತ ಬದಲಾವಣೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ದಾಖಲೆಗಳನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ ಸದರಿ ದಾಖಲೆಗಳನ್ನು ಬೇರೆ ದಾವೆಯಲ್ಲಿ ಸಲ್ಲಿಸಿದ್ದೇವೆ ಎಂದು ನುಡಿಯುತ್ತಾರೆ. ಅವುಗಳನ್ನು ವಾಪಸ್ಸು ಪಡೆದು ಈ ದಾವೆ ಯಲ್ಲಿ ಸಲ್ಲಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ದಾವಾ ಆಸ್ತಿಯನ್ನು ಸರ್ಕಾರದವರು ವೀರಶೈವ ಚಿಕ್ಕ ಮಠಕ್ಕೆ ಮಂಜೂರು ಮಾಡಿದ್ದು ಅದರಲ್ಲಿ ಪ್ರತಿವಾದಿ ಮತ್ತು ಅವರ ಕುಟುಂಬದವರು ಪೂಜೆ ಮಾಡಿಕೊಂಡು 99 ವರ್ಷಗಳಿಂದಲೂ ಅನುಭೋಗದಲ್ಲಿದ್ದಾರೆ ಎಂದರೆ ಸರಿಯಲ್ಲ. ಈ ಕಾರಣದಿಂದ ದೇವನಹಳ್ಳಿ ಪುರಸಭೆ ರವರು ಅನುಭವದ ಆಧಾರದ ಮೇಲೆ ಪ್ರತಿವಾದಿಗಳ ಹೆಸರಿಗೆ ಖಾತೆ ಮಾಡಿದ್ದಾರೆ ಎಂದರೆ

ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದೇವನಹಳ್ಳಿ ಪುರಸಭೆಯಲ್ಲಿ ಖಾತೆ ಯಾರ ಹೆಸರಿನಲ್ಲಿ ಇದೆ ಮತ್ತು ಕಂದಾಯ ಯಾರ ಹೆಸರಿನಲ್ಲಿ ಇದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ ಹಾಗೂ ಈ ಬಗ್ಗೆ ವಿಚಾರ ಮಾಡಿರುವುದಿಲ್ಲ.

6. ವಾದ ಪತ್ರದಲ್ಲಿ ತಿಳಿಸಿರುವ ವಿವರಣೆಯಂತೆ ದಾವಾ ಆಸ್ತಿ ಈಗ ಇರುವುದಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2009-10 ಸಾಲಿನಲ್ಲಿ ಪ್ರತಿವಾದಿಗಳು ಬೈಯಪ್ಪ ಸಂಸ್ಥೆಯಿಂದ ಅನುಮೋದನೆ ಪಡೆದು 4 ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆ ದಾಖಲಿಸುವ ಮೊದಲು ದೇವನಹಳ್ಳಿ ಪುರಸಭೆಯಲ್ಲಿ ದಾವಾ ಆಸ್ತಿಯ ಬಗ್ಗೆ ವಿಚಾರ ಮಾಡಿರುವುದಿಲ್ಲ. ಈ ದಾವೆ ದಾಖಲಿಸುವ ಮೊದಲು ದಾವಾ ಆಸ್ತಿ ಬಳಿ ಹೋಗಿ ಆಗಿದ್ದ ಸ್ಥಿತಿಯ ಬಗ್ಗೆ ತಿಳಿದುಕೊಂಡು ದಾವೆ ಸಲ್ಲಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗೆ ಸಂಬಂದಿಸಿದಂತೆ ಪ್ರತಿವಾದಿಗಳು ಬಾಡಿಗೆ ಹಣದಲ್ಲಿ ಕಂದಾಯ ಪಾವತಿ ಮಾಡುತ್ತಿದ್ದ ಬಗ್ಗೆ ರಶೀದಿಗಳನ್ನು 2007 ರಿಂದ ಕೇಳಿರುತ್ತೇವೆ, ಆದರೆ ಪ್ರತಿವಾದಿಗಳು ಕೊಡುತ್ತೇನೆ ಎಂದು ಹೇಳಿ ಕೊಟ್ಟಿರುವುದಿಲ್ಲ. ಆ ರೀತಿ ಪ್ರತಿವಾದಿಗಳನ್ನು ನಾನು ಕೇಳಿರುವುದಿಲ್ಲ, ಅವರನ್ನು ನಾನು ನೋಡಿರುವುದಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ದಾವಾ ಆಸ್ತಿಯನ್ನು ನನ್ನ ತಾತ ಗೌರಮ್ಮ ಎಂಬುವವರಿಗೆ ತಿಂಗಳಿಗೆ 5 ರೂಗಳಂತೆ ಬಾಡಿಗೆಗೆ ಕೊಟ್ಟಿದ್ದರು. ನನ್ನ ತಾತ ಮತ್ತು ಗೌರಮ್ಮ ನಡುವೆ ಬಾಡಿಗೆ ಕರಾರು ಆಗಿದ್ದ ಬಗ್ಗೆ ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಸದರಿ ದಾಖಲೆಯನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ತಾತ ಮತ್ತು ಗೌರಮ್ಮ ನಡುವೆ ಯಾವುದೇ ಬಾಡಿಗೆ ಕರಾರು ಆಗದೇ ಇದ್ದರೂ ಅದನ್ನು ಸೃಷ್ಟಿಮಾಡಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಾಡಿಗೆಯು 5 ರೂನಿಂದ 10 ರೂಗೆ ಹೆಚ್ಚುವರಿ ಆದ ಬಗ್ಗೆ ಯಾವುದೇ ಕರಾರು ಆಗಿರುವುದಿಲ್ಲ. ಅದನ್ನು ಹೊರತು ಪಡಿಸಿ ಬೇರೆ ಯಾವ ದಾಖಲೆ ಇರುವುದಿಲ್ಲ. ಪ್ರತಿವಾದಿಗಳು ದಾವಾ ಆಸ್ತಿಯಲ್ಲಿ ಯಾರ ಬಳಿಯು ಸಹ ಬಾಡಿಗೆಗೆ ಇರಲಿಲ್ಲ ಎಂದರೆ ಸರಿಯಲ್ಲ.

8. ದಾವಾ ಆಸ್ತಿಯಲ್ಲಿ ಪ್ರತಿವಾದಿಗಳನ್ನು ಹೊರತು ಪಡಿಸಿ ಬೇರೆ ಯಾರು ಬಾಡಿಗೆದಾರರು ಎಂದು ಹೇಳಲು ಆಗುವುದಿಲ್ಲ. ಆಗಿದ್ದರೂ ಸಹ ನನ್ನ ಮುಖ್ಯವಿಚಾರಣೆಯಲ್ಲಿ ಪ್ರತಿವಾದಿಗಳನ್ನು ಹೊರತು ಪಡಿಸಿ ಬೇರೆಯವರೂ ಸಹ ಬಾಡಿಗೆಗೆ ಇದ್ದರು ಅವರಿಂದ ಪ್ರತಿವಾದಿಗಳು ಬಾಡಿಗೆ ಸಂಗ್ರಹಣೆ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳನ್ನು ಒಳಗೊಂಡಂತೆ ದಾವಾ ಆಸ್ತಿಯಲ್ಲಿ ಯಾರು ಬಾಡಿಗೆಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ 1983 ರ ನಂತರ ಪ್ರತಿವಾದಿಗಳಿಗೆ ಬಾಡಿಗೆಯನ್ನು ಸಂಗ್ರಹಣೆ ಮಾಡಲು ಹೇಳಿದ್ದೆವು. ಆ ರೀತಿ ಬಾಡಿಗೆ ಸಂಗ್ರಹಣೆ ಮಾಡಿದ ಹಣವನ್ನು ಪ್ರತಿವಾದಿಗಳ ಬಳಿ ನಾವು ಹೋಗಿ ಕೇಳಿರುವುದಿಲ್ಲ ಏಕೆಂದರೆ ಅವರು ಕಂದಾಯ ಪಾವತಿ ಮಾಡುತ್ತಿದ್ದರು. ಆ ರೀತಿ ಪ್ರತಿವಾದಿಗಳು ಎಷ್ಟು ಕಂದಾಯ

ಪಾವತಿ ಮಾಡುತ್ತಿದ್ದರು ಎಂದು ಪ್ರತಿ 2-3 ತಿಂಗಳಿಗೊಮ್ಮೆ ಕೇಳಿರುತ್ತೇನೆ. ಆ ರೀತಿ 1983 ರಿಂದಲೂ ಸಹ ಕೇಳಿರುತ್ತೇನೆ. ಆ ರೀತಿ ಪ್ರತಿವಾದಿಗಳು ಬಾಡಿಗೆ ಹಣ ನೀಡದೇ ಇದ್ದ ಬಗ್ಗೆ ನಾನು ಯಾವುದೇ ಕಾನೂನು ಕ್ರಮ ಜರುಗಿಸಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಯಾರು ಬಾಡಿಗೆಯಲ್ಲಿ ಇಲ್ಲದೇ ಇರುವ ಕಾರಣ ಪ್ರತಿವಾದಿಗಳು ಬಾಡಿಗೆ ಸಂಗ್ರಹಣೆ ಮಾಡುತ್ತಿದ್ದರು ಎಂದು ಸೃಷ್ಟಿಮಾಡಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. 1983 ರಿಂದ ಈವರೆಗೂ ಪ್ರತಿವಾದಿಗಳ ವಿರುದ್ದ ಯಾವುದೇ ಕಾನೂನು ಕ್ರಮ ಜರುಗಿಸಿರುವುದಿಲ್ಲ ಎಂದರೆ ಸಾಕ್ಷಿ 2020 ರಲ್ಲಿ ನೋಟಿಸ್ ಕೊಟ್ಟಿದ್ದೇವೆ ಎಂದು ನುಡಿಯುತ್ತಾರೆ. 1983 ರಿಂದ 3 ವರ್ಷಗಳ ಒಳಗಾಗಿ ಪ್ರತಿವಾದಿಗಳ ವಿರುದ್ದ ಕಾನೂನು ಕ್ರಮ ಜರುಗಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಅವರು ಖಾಲಿ ಮಾಡುತ್ತೇವೆ ಎಂದು ಹೇಳಿದ್ದ ಕಾರಣ ಕ್ರಮ ಜರಿಗಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಆ ರೀತಿ 1987 ರಿಂದ ಪ್ರತಿವಾದಿಗಳು ಖಾಲಿ ಮಾಡುತ್ತೇವೆ ಎಂದು ಹೇಳಿದ್ದರು. ಆ ರೀತಿ ಪ್ರತಿವಾದಿಗಳು ಖಾಲಿ ಮಾಡುವ ಸಲುವಾಗಿ ಯಾವುದೇ ಸಮಯವಕಾಶವನ್ನು ನಿಗದಿ ಮಾಡಿರಲಿಲ್ಲ. ಪ್ರತಿವಾದಿಗಳು ಅಸಲು ದಾವಾ ಸಂಖ್ಯೆ.123/1987 ರ ಆದೇಶದ ವಿರುದ್ದ ಶೀಘ್ರಗತಿ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದರು.

10. ಅಸಲು ದಾವಾ ಸಂಖ್ಯೆ.123/1987 ಪ್ರತಿವಾದಿಗಳು ನಮ್ಮ ವಿರುದ್ದ ಘೋಷಣಾತ್ಮಕ ಪರಿಹಾರವನ್ನು ಕೋರಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ತೀರ್ಪಿನ ವಿರುದ್ದ ಪ್ರತಿವಾದಿಗಳು ಶೀಘ್ರಗತಿ ನ್ಯಾಯಾಲಯದಲ್ಲಿ ನಿಪಿ-3 ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ನಿಪಿ-3 ರಂತೆ ಪ್ರತಿವಾದಿಗಳ ಸ್ವಾದೀನಕ್ಕೆ ನಾವು ಅಡ್ಡಿ ಪಡಿಸಬಾರದು ಎಂದು ತೀರ್ಪು ಆಯಿತು ಎಂದರೆ ಸರಿ. ಆ ರೀತಿ ಪ್ರತಿವಾದಿಗಳು ಬಾಡಿಗೆದಾರರು ಆಗಿದ್ದರೆ ಕಾನೂನು ಕ್ರಮ ಜರುಗಿಸುವಂತೆ ನಿಪಿ-3 ರಲ್ಲಿ ಉಲ್ಲೇಖ ಮಾಡಲಾಗಿದೆ ಎಂದರೆ ಸರಿ. ಆ ಸಂದರ್ಬದಲ್ಲಿ ನಮ್ಮ ವಕೀಲರು ನಿಪಿ-5 ರ ಅರ್ಜಿ ಇರುವುದಾಗಿ ತಿಳಿಸಿದ್ದ ಕಾರಣ ನಿಪಿ-3 ರಂತೆ ತೀರ್ಪು ನೀಡಲಾಯಿತು ಎಂದರೆ ಸರಿ. ನಿಪಿ-6 ಅರ್ಜಿಯನ್ನು 1987 ರಲ್ಲಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿಯಲ್ಲಿ ಕಾನೂನು ಬದ್ದವಾಗಿ ಮುಂದುವರಿಯವಂತೆ ಆದೇಶ ನೀಡಿರುತ್ತಾರೆ.

**(ಈ ಹಂತದಲ್ಲಿ ಮುಂದುವರಿದ ಪಾಟಿ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**